ಪಿಡಬ್ಲ್ಯೂ-1
ಓ ಎಸ್ 65/2018

ದಿನಾಂಕಃ 15-09-2022 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲುಃ ಶ್ರೀ ಎಲ್ ಎಸ್ ಬಿ 7 ನೇ ಪ್ರತಿವಾದಿ ಪರ ವಕೀಲರಿಂದಃ</u> ನಾನು 7 ನೇ ತರಗತಿಯವರೆಗೆ ವಿಧ್ಯಾಭ್ಯಾಸ ಮಾಡಿದ್ದೇನೆ. ಈ ದಾವೆ ದಾಖಲಿಸಲು ನಾನೇ ಮಾಹಿತಿ ನೀಡಿರುತ್ತೇನೆ. ಈ ದಾವೆಯನ್ನು ಸರ್ವೆ ನಂಬರ 280, 583 ಮತ್ತು 585 ಆಸ್ತಿಗಳಿಗೆ ದಾಖಲಿಸಿದ್ದೇನೆ. ಈ ಆಸ್ತಿಗಳು ಅಂಜಿನಮ್ಮ ಅನ್ನುವವರ ಹೆಸರಿನಲ್ಲಿವೆ. ಅಂಜಿನಮ್ಮನವರ ಹೆಸರಿನಲ್ಲಿರುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ಈ ಆಸ್ತಿಗಳನ್ನು ಹೊರತುಪಡಿಸಿ ಅಂಜಿನಮ್ಮನವರ ಹೆಸರಿಗೆ ಇರುವ ಬೇರೆ ಅಸ್ತಿಗಳ ದಾಖಲೆಗಳನ್ನು ಹಾಜರು ಪಡಿಸಿದ್ದೇನೆ. ರಾಘವೇಂದ್ರ ಮತ್ತು ಮಂಜುನಾಥ ಇವರ ಹೆಸರಿನಲ್ಲಿಯು ಆಸ್ತಿಗಳು ಇವೆ ಅಂದರೆ ಸರಿ. ರಾಘವೇಂದ್ರ ಮತ್ತು ಮಂಜುನಾಥ ಇವರ ಹೆಸರಿನಲ್ಲಿರುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಅಂದರೆ ಸರಿಯಲ್ಲ.

2. ಸರ್ವೆ ನಂಬರ 585/1 ರಲ್ಲಿ 41 ಸೆಂಟ್ಸ ಜಾಗ, 1 ಮತ್ತು 2 ನೇ ಪ್ರತಿವಾದಿಗಳ ಹೆಸರಿನಲ್ಲಿವೆ ಅಂದರೆ ಸರಿಯಲ್ಲ. ಸರ್ವೆ ನಂಬರ 585/2 ರಲ್ಲಿ 55 ಸೆಂಟ್ಸ ಜಾಗ 3 ನೇ ಪ್ರತಿವಾದಿಯ ಹೆಸರಿನಲ್ಲಿದೆ ಅಂದರೆ ಸರಿಯಲ್ಲ. 3 ನೇ ಪ್ರತಿವಾದಿ ನನ್ನ ತಂದೆಯ 2 ನೇ ಪತ್ನಿಯ ಮಗಳು ಅಂದರೆ ಸರಿ. ಸರ್ವೆ ನಂಬರ 586/1 ರಲ್ಲಿ 95 ಸೆಂಟ್ಸ ಜಾಗ ನನ್ನ ತಾಯಿ ಅಂಜಿನಮ್ಮನ ಹೆಸರಿನಲ್ಲಿದೆ ಅಂದರೆ ಸರಿ. 1 ಮತ್ತು 2 ನೇ ಪ್ರತಿವಾದಿಗಳ ಹೆಸರಿಗೆ ಮೇಲೆ ಹೇಳಿದ ಸರ್ವೆ ನಂಬರಗಳಿಗೆ ಯಾವಾಗ ಖಾತೆ ಬದಲಾವಣೆಯಾಗಿರುತ್ತದೆ ಅನ್ನುವುದು ನನಗೆ ಗೊತ್ತಿಲ್ಲ. ನನ್ನ ಮಲತಾಯಿ ವೆಂಕಮ್ಮ ಈಗಲೂ ಜೀವಂತ ಇದ್ದಾರೆ. ನಾನು ನನ್ನ ಗಂಡನ ಮನೆ ಹೊಸಪೇಟೆಯಲ್ಲಿ ವಾಸಿಸುತ್ತಿದ್ದೇನೆ. ಈಗ 18 ವರ್ಷಗಳಿಂದ ಅಲ್ಲಿ ವಾಸಿಸುತ್ತಿದ್ದೇನೆ. 1 ಮತ್ತು 2 ನೇ ಪ್ರತಿವಾದಿಗಳು ಕಾಂಟ್ರ್ಯಾಕ್ಟ ಕೆಲಸ ಮಾಡುತ್ತಾರೆ.

3. ದಾವಾ ಅನುಸೂಚಿ 1 ಆಸ್ತಿಯನ್ನು 7 ನೇ ಪ್ರತಿವಾದಿಯು ಯಾವಾಗ, ಯಾರಿಂದ ಖರೀದಿ ಮಾಡಿರುತ್ತಾರೆ ಅನ್ನುವುದು ನನಗೆ ಗೊತ್ತಿಲ್ಲ. 7 ನೇ ಪ್ರತಿವಾದಿಯ ಕ್ರಯಪತ್ರಕ್ಕೆ ವೆಂಕಮ್ಮ ಸಹಿ ಮಾಡಿದ್ದಾರೆ ಅಂದರೆ ನನಗೆ ಗೊತ್ತಿಲ್ಲ . 7 ನೇ ಪ್ರತಿವಾದಿಯು ಆಸ್ತಿಯನ್ನು ಖರೀದಿ ಮಾಡಿದ ನಂತರ 1 ಮತ್ತು 2 ನೇ ಪ್ರತಿವಾದಿಗಳು ಏನದರು ತಕರಾರು ಮಾಡಿರುತ್ತಾರೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನನ್ನ ಮತ್ತು ಪ್ರತಿವಾದಿ 1 ಮತ್ತು 2 ರವರ ಮದುವೆಯ ಖರ್ಚಿಗೆ ಈ ಅಸ್ತಿಯನ್ನು 7 ನೇ ಪ್ರತಿವಾದಿಗೆ ಮಾರಾಟ ಮಾಡಲಾಗಿದೆ ಅಂದರೆ ಸರಿಯಲ್ಲ. ನನ್ನ ತಂದೆ 20 ವರ್ಷಗಳಿಂದ ತೀರಿಕೊಂಡಿರುತ್ತಾರೆ. 2 ನೇ ಪ್ರತಿವಾದಿಯು ತಾನು ಈ ಆಸ್ತಿಯನ್ನು ಖರೀದಿ ಮಾಡಿದ ದಿನದಿಂದ ಇಲ್ಲಿಯವರೆಗೂ ಸ್ವಾಧೀನದಲ್ಲಿದ್ದಾರೆ ಅಂದರೆ ನನಗೆ ಗೊತ್ತಿಲ್ಲ. 7 ನೇ ಪ್ರತಿವಾದಿಯು ಆ ದಿನದ ಮಾರುಕಟ್ಟೆಯ ಬೆಲೆಗೆ ಈ ಆಸ್ತಿಯನ್ನು ಖರೀದಿ ಮಾಡಿದ್ದಾರೆ ಅಂದರೆ ಗೊತ್ತಿಲ್ಲ. ಆಗ ಮಾರುಕಟ್ಟೆ ಬೆಲೆ ಕಡಿಮೆ ಇದ್ದು, ಈಗ ಜಾಸ್ತಿಯಾಗಿದೆ ಅನ್ನುವ ದುರುದ್ದೇಶದಿಂದ ನಾನು ಈ ದಾವೆ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ.

4. 7 ನೇ ಪ್ರತಿವಾದಿಯು 1 ಮತ್ತು 2 ನೇ ಪ್ರತಿವಾದಿಗಳ ಹೆಸರಿನಲ್ಲಿರುವ ದಾಖಲೆಗಳನ್ನು ನೋಡಿಯೇ ಅಸ್ತಿಗಳನ್ನು ಖರೀದಿ ಮಾಡಿದ್ದಾರೆ ಅಂದರೆ ನನಗೆ ಗೊತ್ತಿಲ್ಲ. 7 ನೇ ಪ್ರತಿವಾದಿಯು ಖರೀದಿಸಿದ ಅಸ್ತಿಯಲ್ಲಿ ನಾನಗಾಲಿ, ಪ್ರತಿವಾದಿ 1 ರಿಂದ 6 ರವರಿಗೆ ಆಗಲಿ ಯಾವುದೇ ಹಕ್ಕು ಇರುವುದಿಲ್ಲ ಅಂದರೆ ಸರಿಯಲ್ಲ. ಸರ್ವೆ ನಂಬರ 585 ರ ಪಹಣಿ ಪತ್ರಿಕೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ಸರ್ವೆ ನಂಬರ 585/2 ಆಸ್ತಿಯು ಯಾರ ಹೆಸರಿನಲ್ಲಿದೆ ಎಂದು ಹೇಳಲು ಆಗುವುದಿಲ್ಲ. ನನ್ನ ತಾಯಿ ಮತ್ತು ವೆಂಕಮ್ಮ ವಾಸಿಸುತ್ತಿರುವ ಮನೆಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಆ ಮನೆಗಳ ಸಂಖ್ಯೆ ಗೊತ್ತಿಲ್ಲ. 7 ನೇ ಪ್ರತಿವಾದಿಯು ಖರೀದಿಸಿರುವ ಆಸ್ತಿಯ ಮೇಲೆ ನನಗೆ

ಪಿಡಬ್ಲ್ಯೂ-1
ಓ ಎಸ್ 65/2018

ಯಾವುದೇ ಹಕ್ಕು ಮತ್ತು ಅಧಿಕಾರ ಇಲ್ಲದಿದ್ದರೂ ಸಹ ಸುಳ್ಳು ದಾವೆ ದಾಖಲಿಸಿದ್ದೇನೆ ಅಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿರುವುದರಿಂದ ಅಂತಿಮವಾಗಿ ಮುಂದೂಡಲಾಯಿತು .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಹಿ.ಸಿ.ಜೆ. ಮತ್ತು ಜೆಎಂಎಫ್‌ಸಿ.,
ಕೂಡ್ಲಿಗಿ.